# ‘ರಂಗ ಬಾರೋ’

Evil is a faceless stranger, living in a distant neighborhood.
Evil has a wholesome, hometown face, with merry eyes and an open smile.
Evil walks among us, wearing a mask, which looks like all our faces
**- The Book of Counted Sorrows by Dean R. Koontz**

ಶೃಂಗೇರಿ ಶಾರದೆಯ ದರ್ಶನ ಮಾಡಿಕೊಂಡು, ಕಿಗ್ಗಾಕ್ಕೆ ಹೋಗುವ ಮುನ್ನ ತಿಂಡಿ ತಿಂದು ಬಿಡೋಣವೆಂದು ನಾವಿಬ್ಬರೂ ಜಿಟಿಜಿಟಿ ಮಳೆಯಿಂದ ತಪ್ಪಿಸಿಕೊಳ್ಳುತ್ತ ಆ ಹೋಟೆಲ್ ತಲುಪಿದೆವು, ಹೋಟೆಲಿನ ಹೊರಗಡೆ ಮಳೆಯಲ್ಲಿ ಚತ್ರಿ ಹಿಡಿದು ನಿಂತ ಪೋಲಿಸರನ್ನು ಕಂಡು ಇವನು ‘ನೋಡೋ’ ಎಂದ. ಹೋಟೆಲ್ ಜನರಿಂದ ಗಿಜಿಗುಡುತ್ತಿತ್ತು. ನಾವು ಕೂರಲು ಜಾಗ ಹುಡುಕುತ್ತ ಅತ್ತಿತ್ತ ನೋಡುತಿದ್ದೆವು; ಅಲ್ಲಿ ನಾವು ನಿಂತ ಹತ್ತಿರದ ಟೇಬಲಿನಲ್ಲೇ ನಿಂತ ನಮಗೆದುರಾಗಿ ಆಕೆ ಒದ್ದೆಗೂದಲಿನಲ್ಲಿ ಕೆಂಪುಕಣ್ಣು ಮಾಡಿಕೊಂಡು ಅವಳು ಕುಳಿತಿದ್ದಳು, ಸಿಟ್ಟು ಮಾಡಿಕೊಂಡ ಪುಟ್ಟಗೌರಿಯಂತೆ. ಪಕ್ಕದಲ್ಲಿ ಕುಳಿತಿದ್ದ ಅವರಪ್ಪ ತಿನ್ನಲಾರದ ಅವಳ ಬಾಯಿಗೆ ಇಡ್ಲಿಯ ತುತ್ತೊಂದನ್ನು ಇಡುತ್ತಿದ್ದ. ನಮ್ಮನ್ನು ನೋಡಿದ ಕೂಡಲೇ ಅವಳು ಮಾತನಾಡಿದಳು,

‘ಶಮೀ... ಶಮೀ...’ ನಾವು ನೋವಿನ ನಗೆ ನಕ್ಕೆವು, ಅವಳು ಮಾತು ಮುಂದುವರೆಸಿದಳು,

‘ಈ ಪ್ರಾರಬ್ಧಕ್ಕೆ ಇದೇ ಸರಿಯಾದ ಕೊನೆ... ಇಲ್ಲ ನಾನು ಬದುಕಿರೋ ತನಕ ಈ ಪಾಪ ಮಾಡೋಕೆ ಬಿಡೊಲ್ಲ... ನಾನು ತೀರ್ಮಾನಿಸಿಕೊಂಡೇ ಬಂದಿದೀನಿ... ಬುದ್ಧಿ ಬೆಳೆಯೊಲ್ಲ, ಆರೋಗ್ಯ ನೋಡು ಎಷ್ಟು ದಿವಿನಾಗಿದೆ, ಗಟ್ಟಿ ಪಿಂಡ ಇದು, ಜೀವನದುದ್ದಕ್ಕೂ ಜೊತೆಗೆ ಗಂಟು ಬೀಳುತ್ತೆ... ಹೆಣ್ಣು ಬೇರೆ, ಇನ್ನೂ ಏನೇನು ಅನುಭವಿಸೋಕಿದೆಯೋ...?’ ಅವಳಪ್ಪ ಅವಳ ಬಾಯಿಂದ ಬರುತಿದ್ದ ಮಾತುಗಳನ್ನು ಕೇಳಿ ದಿಗ್ಭ್ರಾಂತನಾದ, ಅವಳ ಬಾಯಿಗೆ ತಟ್ಟನೇ ನೀರಿನ ಲೋಟವನ್ನು ಬಲವಾಗಿ ಆನಿಸಿದ. ಮಾತಿನ ಮಧ್ಯೆ ನುಂಗಿದ ಇಡ್ಲಿ ತಲೆಗೆ ಹತ್ತಿ ಅವಳು ಕೆಮ್ಮಿ ಬಿಕ್ಕಳಿಸಿದಳು, ಚೀರಿದಳು, ಅವಳಪ್ಪ ತಲೆ ತಟ್ಟಿ ನೇವರಿಸಿ ‘ನೀರು ಕುಡಿ  ಅನ್ನುತ್ತಿದ್ದ. ನಾವಿಬ್ಬರೂ ಅಯೋಮಯರಾಗಿ ನಿಂತೇ ಇದ್ದೆವು,

‘...ನಾನು ಇಲ್ಲೇ ಸತ್ತರೂ ಸರಿ, ನಾನು ಹೆತ್ತ ಜೀವ ಇದು, ಈ ಪಾಪ ನಾನು ಮಾಡೋಲ್ಲ...’, ‘...ನೋಡು ನಿನಗೆ ಜೀವನ ಕೊಟ್ಟಿದೀನಿ, ಬಡವರ ಮನೆಯಿಂದ ಹೆಣ್ಣು ತಂದಿದೀನಿ...’, ‘...ನಿಮ್ಮ ವಂಶದಲ್ಲೇ ಇದ್ದದ್ದು ಈ ರೋಗ...’, ‘...ಬಿಟ್ಟುಬಿಡು, ಈ ಜಾಗದಲ್ಲಿ ಯಾವುದು ಪಾಪವಲ್ಲ, ದೇವ್ರು ನೋಡ್ಕೋತಾನೆ, ತುಂಗೆಯಲ್ಲಿ ಹರಿದುಹೋಗುತ್ತೆ...’, ‘...ಇಲ್ಲ... ...ಇಲ್ಲ... ...ಇಲ್ಲ...’, ಇವನು ನನ್ನನ್ನು ತಿವಿದು ಎಚ್ಚರಿಸಿದ, ಈ ಮೂಲೆಯ ಟೇಬಲ್ ಖಾಲಿಯಾಗಿತ್ತು, ಅವಳಪ್ಪ ನಮ್ಮನ್ನೇ ಕೆಕ್ಕರಿಸಿಕೊಂಡು ನೋಡುತ್ತಿದ್ದ, ಶಮೀ ಇನ್ನೂ ಬಿಕ್ಕುತ್ತಿದ್ದಳು; ಮಾತನಾಡುತ್ತಿದ್ದಳು, ‘...ಶೂ ಕಚ್ಚುತ್ತೆ...’

‘...ರಂಗ ಬಾರೋ ಪಾಂಡುರಂಗ ಬಾರೋ... ಶ್ರೀ ರಂಗ ಬಾರೋ ನರಸಿಂಗ ಬಾರೋ...’ ಬಸ್ಸು ಆಲ್ದೂರು ದಾಟಿ ತಿರುವು–ಮುರುವು ರಸ್ತೆಯಲ್ಲಿ ಮುಂದೋಡುತ್ತಿತ್ತು. ನೀರವ ರಾತ್ರಿ, ಹೊರಗಡೆ ಧಾರಾಕಾರ ಮಳೆ, ಇವನು ನನ್ನ ತೊಡೆಮೇಲೆ ಶಾಲನ್ನು ಗಟ್ಟಿಯಾಗಿ ಬಿಗಿದುಕೊಂಡು ನಿದ್ದೆ ಹೋಗಿದ್ದ, ಛಳಿಯಾದಂತಾಗಿ ನಾನೂ ನನ್ನ ಜಾಕೆಟ್‌ನ ಜಿಪ್‌ಮೇಲಕ್ಕೆಳೆದುಕೊಂಡು ಬೆನ್ನು ನೇರಮಾಡಿಕೊಂಡು ಕುಳಿತೆ. ಅವಳು ಹಾಡುತ್ತಿದ್ದಳು, ಇಂಪಾಗಿ, ಸುಶ್ರಾವ್ಯವಾಗಿ ಹಾಡುತ್ತಿದ್ದಳು, ‘ಕಂದ ಬಾರೋ ಎನ್ನ ತಂದೆ ಬಾರೋ... ಇಂದಿರಾ ರಮಣ ಮುಕುಂದ ಬಾರೋ...’ ಅವಳ ಕಂಠದಲ್ಲಿ ನೋವೂ ಇತ್ತೇನೋ ಅವಳಿಗೆ ಯಾವುದರ ಪರಿವೆಯೂ ಇರಲಿಲ್ಲ. ನಾನು ಇವನ್ನನ್ನು ತಟ್ಟಿ ಎಬ್ಬಿಸಿದೆ, ‘ಕೇಳೋ ಶಮೀ ಹಾಡ್ತಿದಾಳೆ...’ ಅವನಿಗೆ ಅದೆಷ್ಟು ಅರ್ಥವಾಯಿತೋ ಹೂಂಗುಟ್ಟುತ್ತ ಎದ್ದು ಮಗ್ಗುಲು ಬದಲಿಸಿ, ಕಿಟಕಿಗೊರಗಿ ನಿದ್ದೆ ಹೋದ, ನಾನು ಅವಳ ಹಾಡು ಕೇಳುತ್ತ ಕುಳಿತೆ, ‘ರಂಗ ಬಾರೋ ಪಾಂಡುರಂಗ ಬಾರೋ... ಶ್ರೀ ರಂಗ ಬಾರೋ ನರಸಿಂಗ ಬಾರೋ...’

...ನಾವು ಬೆಂಗಳೂರಿನಿಂದ ಶೃಂಗೇರಿಯ ಬಸ್‌ಹತ್ತಿದಾಗ ಶುಕ್ರವಾರದ ರಾತ್ರಿ ಹತ್ತೂಮುಕ್ಕಾಲು, ಮರುದಿನ ಶೃಂಗೇರಿ ಶಾರದೆಯ ದರ್ಶನ ಮಾಡಿಕೊಂಡು, ಕಿಗ್ಗಾಕ್ಕೆ ಹೋಗಿ ಅಲ್ಲಿಂದ ಕಾಡಿನ ನಡುವೆ ಅಡಗಿದ್ದ ಜಲಪಾತವೊಂದಕ್ಕೆ ಚಾರಣಗೈಯುವುದೆಂದು ತೀರ್ಮಾನವಾಗಿತ್ತು, ಉಸಿರಾಡಲೂ ಪುರಸೊತ್ತಿಲ್ಲದ ವಾರದ ಆಯಾಸದಿಂದ ಬಸ್ಸಿನಲ್ಲಿ ಕುಳಿತ ತಕ್ಷಣ ನನಗೆ ಜ್ವರಬಂದಂತೆ ನಿದ್ದೆ. ಬೆಂಗಳೂರಿನ ಟ್ರಾಫಿಕ್ಕು, ಧೂಳು, ಜನಜಂಗುಳಿಯಿಂದ ಬಸ್ಸು ಮುಂದೋಡಿ ಎಡೆಯೂರು ತಲುಪುವಹೊತ್ತಿಗೆ ಸೆಖೆಯೆಲ್ಲ ಮುಗಿದು, ಛಳಿಗಾಳಿ ಶುರುವಾದಾಗ, ನನ್ನ ಆಯಾಸವೂ ಕರಗಿ ನಿದ್ದೆ ಬಿಟ್ಟೆದ್ದೆ. ಇನ್ನು ಬಸ್ಸಿನಲ್ಲಿ ಇಷ್ಟೇ ನನ್ನ ನಿದ್ರೆ ಎಂದುಕೊಂಡು ಕತ್ತಲಲ್ಲೂ, ಹೊರಗೆ ಸಣ್ಣಗೆ ಸುರಿಯುತ್ತಿದ್ದ ಮಳೆ ನೋಡುತ್ತ ಕುಳಿತೆ, ಇವನು

ಗಾಢನಿದ್ರೆಯಲ್ಲಿದ್ದ. ನಮಗಿಂತ ಎರಡು ಸಾಲು ಸೀಟುಗಳ ಮುಂದೆ ಒಂದು ಸುಂದರವಾದ ಹುಡುಗಿ ಕುಳಿತಿದ್ದಳು, ಅವಳ ಪಕ್ಕ ಕಪ್ಪನೆ ಕರಡಿಯಂತಹ ದೈತ್ಯನೊಬ್ಬ ಕುಳಿತಿದ್ದ. ಬಸ್ ಹತ್ತಿದಾಗಲೇ ಇವನು ಇಡೀ ಬಸ್ಸನ್ನು ಪರಿಶೀಲಿಸಿ ಕುಳಿತ ಹುಡುಗಿಯರ ಬಗ್ಗೆ ವರದಿ ಒಪ್ಪಿಸಿದ್ದ, ನಾನು ನಕ್ಕಿದ್ದೆ, 'ಆ ದೈತ್ಯ ಅವಳಪ್ಪ ಇರಬೇಕೋ, ಜೋಪಾನ!' ಅವನೂ ನಕ್ಕಿದ್ದ. ಅವರ ಸಾಲಿನ ಮುಂದಿನ ಸೀಟಿನಲ್ಲಿ ಆರೇಳು ವರ್ಷದ ಹೆಣ್ಣು ಮಗು, ಮತ್ತು ಆಕೆಯ ತಾಯಿಯಿರಬೇಕು; ಕುಳಿತಿದ್ದರು, ವಾರಾಂತ್ಯವಾದುದರಿಂದ ಇಡೀ ಬಸ್ಸು ಶೃಂಗೇರಿಗೆ ಹೋಗುವವರಿಂದ ತುಂಬಿಹೋಗಿತ್ತು. ಎಲ್ಲರೂ ಮಲಗಿದ್ದ ಆ ಸಮಯದಲ್ಲಿ ಆ ಸಣ್ಣ ಹುಡುಗಿ ಮಾತನಾಡುತ್ತಿದ್ದಳು, 'ಚಪ್ಪಲಿ ಹೊರಗೆ ಬಿಡ್ಬೇಕು, ಚಪ್ಪಲಿ ಹೊರಗೆ ಬಿಡ್ಬೇಕು' ಅವರಮ್ಮ ಅವಳೊಂದಿಗೆ ಮಾತನಾಡುತ್ತಿದ್ದರು, 'ಇಲ್ಲಮ್ಮ, ಬಸ್ಸಲ್ಲಿ ಪರವಾಗಿಲ್ಲ, ಹಾಕೊಂಡ್ ಕೂತ್ಕೋಬಹುದು', 'ಮನೆಯೆಲ್ಲ ಕಸವಾಗುತ್ತೆ', 'ಮನೆ ಅಲ್ಲಮ್ಮ ಇದು ಬಸ್ಸು, ನಾವು ಶಾರದಮ್ಮನ್ನ ನೋಡೋಕೆ ಹೋಗ್ತಾ ಇದೀವಿ', 'ಚಪ್ಪಲಿ ಹೊರಗೆ ಬಿಡ್ಬೇಕು...' ಆ ಹುಡುಗಿ ಇನ್ನೂ ಮಾತನಾಡುತ್ತಲೇ ಇದ್ದಳು, ಅವರಮ್ಮ ಆಗಾಗ 'ಕಣ್ಮುಚ್ಕೋ, ಮಲಕ್ಕೋ, ಮಾತನಾಡಬೇಡ, ಎಲ್ಲರೂ ನಿದ್ದೆ ಮಾಡ್ತಿದಾರೆ, ತೊಂದರೆಯಾಗುತ್ತೆ' ಅನ್ನುತ್ತಲೇ ಇದ್ದರು, ಆದರೂ ಅವಳು ಬಾಯಿಗೆ ಬಂದದ್ದೆಲ್ಲ ಮಾತನಾಡುತ್ತಲೇ ಇದ್ದಳು, ಅವಳ ನೆನಪಿನಲ್ಲಿ ಉಳಿದಿದ್ದ ಮಾತುಗಳು, ಬೇರೆಯವರು ಆಡಿದ ಮಾತುಗಳೆಲ್ಲ ಬರುತಿದ್ದವು, ಅಚ್ಚರಿಯೆಂದರೆ ಅವಳ ಮಾತಿನ ಧ್ವನಿ-ಧಾಟಿಯೂ ಮಾತನಾಡಿದವರಂತೆಯೇ ಇತ್ತು. ಅವಳು ಗಡುಸು ಧ್ವನಿಯಲ್ಲಿ 'ಇವಳೇ, ನನ್ನ ಶೂ ಎಲ್ಲಿದೆ? ಈ ಅನಿಷ್ಟಾನ ನೋಡು, ಇಲ್ಲೇ ಎಲ್ಲ ಮಾಡ್ಕೊಂಡಿದೆ, ಇದೆಲ್ಲ ಕ್ಲೀನ್ ಮಾಡು ಮೊದಲು', ಅಂದಳು; ಅವಳಪ್ಪನ ಧ್ವನಿಯಿರಬೇಕು. ಅವಳಮ್ಮ ಅಂದರು, 'ಸುಮ್ನೇ ಮಲಕ್ಕೋ ಶಮೀ.. ಅಪ್ಪಂಗೆ ಸಿಟ್ಟು ಬರುತ್ತೆ' ಅಂದ ಕೂಡಲೇ ಆಕೆ ಮೌನವಾದಳು, ಅದೆಲ್ಲ ಬರೀ ಐದು ನಿಮಿಷವಷ್ಟೇ, ಮತ್ತೆ ಗುಣುಗುಣು ಮಾತು ಶುರುಮಾಡಿದಳು, '...ಇವಳಿಂದಾಗಿ ಮಡಿ-ಮೈಲಿಗೆ ಏನೂ ಇಲ್ಲ, ಈ ಮನೆಯಲ್ಲಿ ರಾಮ, ರಾಮಾ...'

ಮೂರು ಮುಕ್ಕಾಲಿಗೆ ಚನ್ನರಾಯಪಟ್ಟಣ ದಾಟಿ 'ಕಾಮತ್ ಉಪಚಾರ'ದಲ್ಲಿ ಬಸ್ಸು ನಿಂತಾಗ ಇವನು ಎಚ್ಚೆತ್ತ. ಮುಂದಿನ ಸೀಟಿನ ಕರೀ ದೈತ್ಯ ತನ್ನ ಸೀಟಿನಿಂದ ಇಳಿದುಹೋಗಿದ್ದ, ಪಕ್ಕದಲ್ಲಿದ್ದ ಸುಕೋಮಲೆ ಮಗಳು ಮುದುಡಿಕೊಂಡು ಮಲಗಿದ್ದಳು. ಅವರ ಮುಂದಿನ ಸೀಟಿನ ತಾಯಿ ಮತ್ತು ಪುಟ್ಟ ಮಗಳು ಇಳಿದುಹೋಗಿದ್ದರು. ನೀರು-ಕಾಫಿಗೋಸ್ಕರ ನಾವೂ ಕೆಳಗಿಳಿದೆವು. ಹೋಟೆಲಿನ ಮುಂದೆ ತಾಯಿ-ಮಗಳು ನಿಂತಿದ್ದರು. ಪುಟ್ಟ ಹುಡುಗಿ ಶಾಲನ್ನು ಗಟ್ಟಿಯಾಗಿ ಸುತ್ತಿಕೊಂಡು ನಿಂತಿದ್ದಳು; ಅರ್ಧ ನಾಲಿಗೆ ಹೊರಗಿತ್ತು, ಬಾಯಿಯಿಂದ ಜೊಲ್ಲು ಸೋರುತ್ತಿತ್ತು, ಕಣ್ಣಿನ ದೃಷ್ಟಿ-ಎಲ್ಲೋ ಕಳೆದು ಹೋದಂತೆ. ನಾವಿಬ್ಬರೂ ಹೋಟೆಲಿನತ್ತ ನಡೆದೆವು. ಹತ್ತಿರಾದಾಗ ಇವನು ಆ ಸಣ್ಣ ಹುಡುಗಿಗೆ ವಿಶ್ ಮಾಡಿದ, 'ಹಾಯ್!' ಅವಳು ಪ್ರತಿಕ್ರಿಯಿಸಲಿಲ್ಲ; ನಮ್ಮೆಡೆಗೆ ನೋಡಲೂ ಇಲ್ಲ. ತಾಯಿ ನಮ್ಮೆಡೆಗೆ ನೋಡಿ ಸಣ್ಣಗೆ ನಗು ಬೀರಿದರು, ಪುಟ್ಟ ಹುಡುಗಿ ತಟ್ಟನೆ ನುಡಿದಳು, 'ಶೂ ಕಚ್ಚುತ್ತೆ!' ಆಕೆಯ ದೃಷ್ಟಿ ಈಗ ನನ್ನ ಶೂಗಳ ಮೇಲಿತ್ತು. ಅವರಮ್ಮ ಸ್ವಲ್ಪ ಸಂಕೋಚದಿಂದಲೇ ವಿವರಣೆ ಶುರುವಿಟ್ಟರು, 'ಅವರಪ್ಪನ ಹೊಸ ಶೂನಿಂದ ಅವರ ಕಾಲು ಕಚ್ಚಿ ಗಾಯವಾಗಿತ್ತು. ಆಗ ಅವರು ಆಡಿದ ಮಾತುಗಳ್ನೇ ನೆನಪಿಟ್ಕೊಂಡಿದಾಳೆ' ಇವನು ಸುಮ್ಮನಿರದೇ 'ಓಹೋ ಸಕ್ಕತ್ ಬುದ್ದಿವಂತೆ ಪುಟ್ಟಿ, ನಿನ್ಹೆಸರೇನಮ್ಮಾ?' ಅವಳು ಅದಕ್ಕೆ ಉತ್ತರಿಸಲಿಲ್ಲ. ಅವರಮ್ಮ ನುಡಿದರು, 'ನನ್ಹೆಸರು ಗೀತಾ, ನಿನ್ಹೆಸರೇನು?' ಅವಳು ತಟ್ಟನೆ ನುಡಿದಳು, 'ನನ್ಹೆಸರು ಶರ್ಮಿಳಾ!' ನಾನು ನಕ್ಕು ಕೇಳಿದೆ, 'ನನ್ಹೆಸರು ಶಿವು, ನಿನ್ಹೆಸರೇನು?' ಅವಳು ಮತ್ತೆ ಪುನರುಚ್ಚರಿಸಿದಳು, 'ಶಮೀ, ಶಮೀ...' ಇವನ ಅದೇ ಪ್ರಯೋಗಕ್ಕೆ ಆಕೆ ಪ್ರತಿಕ್ರಿಯಿಸಲೇ ಇಲ್ಲ. ನಾವೆಲ್ಲ ನಕ್ಕೆವು. ಇವನು ಮಂಡಿಯೂರಿ ಕುಳಿತು ತುಟಿಯುಬ್ಬಿಸಿ, 'ಕಳ್ಳಿ, ನನಗೆ ಮಾತ್ರ ಹೆಸರು ಹೇಳಲೇ ಇಲ್ಲ, ನಾನು ನಿನ್ಜೊತೆ ಮಾತಾಡೊಲ್ಲ ಠೂ' ಅಂದ. ಅವಳು ಅವನ ಶೂಗಳನ್ನೇ ನೋಡುತ್ತ 'ಶೂ ಕಚ್ಚುತ್ತೆ' ಅಂದಳು, ಮತ್ತೆ ನಾವೆಲ್ಲ ನಕ್ಕೆವು. ನಾನು ಆಕೆಯ ಅಮ್ಮನನ್ನು ಕೇಳಿದೆ, 'ಏನಾದ್ರೂ ಬೇಕಿತ್ತಾ ಮೇಡಂ? ಕಾಫಿ, ಹಾಲು?' ಅವರು ಸಂಕೋಚದಿಂದ, 'ಇಲ್ಲ, ನಮ್ಮೆಜಮಾನರಿಗೆ ಕಾಯ್ತಾ ಇದೀವಿ, ಟಾಯ್ಲೆಟ್‌ಕಡೆ ಹೋಗಿದಾರೆ.' ನಾವು ಸರಿಯೆಂದು ಹೋಟೆಲಿನೊಳಹೊಕ್ಕೆವು. ಇವನು ನುಡಿದ, 'ಅದ್ಯಾರು ಮಾರಾಯ, ಅವರ ಗಂಡ? ಬಸ್ಸಲ್ಲಿ ಮಗಳು ಹೆಂಡತಿಯನ್ನು ಒಂದ್ಕಡೆ ಕೂರಿಸಿ ತಾನು ಮಾತ್ರ ಬೇರೆ ಕಡೆ ಕೂತ್ಕೊಂಡು ಪ್ರಯಾಣಮಾಡ್ತಾ ಇರೋದು?' ನಾವು ಕಾಫಿ ಕುಡಿದು ಹೊರಬಂದಾಗ ಆ ಪ್ರಶ್ನೆಗೆ ಉತ್ತರ ಸಿಕ್ಕಿತ್ತು. ಸುಕೋಮಲೆ ಹುಡುಗಿಯ ಪಕ್ಕ ಕುಳಿತಿದ್ದ ಕರೀ ದೈತ್ಯ ಇವರೊಡನೆ ಮಾತನಾಡುತ್ತ ನಿಂತಿದ್ದ. ಆತ, ತಾಯಿ ಮತ್ತು ಮಗು ಮೂವರೂ ಬಸ್ ಹತ್ತಿದರು. ನಾನು ನುಡಿದೆ, 'ನೋಡಿದ್ಯಾ ಆ ದೈತ್ಯ ನಮ್ಮ(!) ಹುಡುಗಿಯ ಅಪ್ಪ ಅಲ್ಲ. ಶಮೀ ಅಪ್ಪ, ಸಧ್ಯ!', ಇವನು 'ಎಂಥಾ ಮನುಷ್ಯ ಮಾರಾಯ. ಆ ಸುಂದರ ಹುಡುಗಿ ಜೊತೆ ಹೆಂಡತಿಯನ್ನು ಕೂರೋಕೆ ಬಿಟ್ಟು ತಾನು ಮಗಳನ್ನು ಕೂರಿಸ್ಕೊಂಡು ಪ್ರಯಾಣ ಮಾಡೋದು ಬಿಟ್ಟು ತಾನು ದೊಡ್ಡ ಗಡವನ ತರಹ ಆ ಹುಡ್ಗಿ ಜೊತೆ ಕೂತಿದಾನೆ, ಡಬ್ಬಾ ಮ್ಯಾನ್' ಅಂದ. 'ಹೌದು, ಆದ್ರೆ ಆ ಮಗು-ಶಮೀ ನ ಕಂಡ್ರೆ ಅವನಿಗೆ ಅಷ್ಟೇನು ಪ್ರೀತಿಯಿಲ್ಲ ಅನ್ಸುತ್ತೆ. ಬಸ್ಸಲ್ಲಿ ಬರುವಾಗ ಶಮೀ ಯಾವ್ಯಾವಾಗಲೋ ಅವನಾಡಿದ ಮಾತುಗಳನ್ನೆಲ್ಲ ರಿಪೀಟ್ ಮಾಡ್ತಾ ಇದ್ಲು,

ಗೊತ್ತಾ? ಎಲ್ಲ ಬೈಗುಳಗಳೇ, ಪ್ರಾರಬ್ಧ, ಶನೀ, ಅನಿಷ್ಟ...' ನಮ್ಮ ಬಸ್ಸಿನ ಕಂಡಕ್ಟರ್ ಸೀಟಿಯೂದಿದ. ಇವನು 'ಜಾಸ್ತಿ ತಲೆ ಓಡಿಸ್ಬೇಡ ಬಾ' ಅಂದು ಓಡಿದ. ನಾನೂ ಹಿಂದೆ ಓಡಿ ಬಸ್ ಹತ್ತಿದೆ. ಮೊದಲಿನಂತೆಯೇ ಶಮೀ ಮತ್ತು ಅವರಮ್ಮ ಮುಂದಿನ ಸೀಟಿನಲ್ಲಿ. ಅವರಪ್ಪ ಹಿಂದಿನ ಸೀಟಿನಲ್ಲಿ. ನಮ್ಮ ಸುಕೋಮಲೆಯೊಂದಿಗೆ! 'ಸಧ್ಯ ಈಗ ಖುಷಿಯಾಯ್ತು', ಇವನು ನುಡಿದ. 'ಯಾಕೆ?', 'ಆ ದಢಿಯ ನಮ್ಮ ಹುಡ್ಗಿ ಅಪ್ಪ ಅಲ್ವಲ್ಲ!'. ಇಬ್ಬರೂ ನಕ್ಕೆವು. ಬಸ್ಸು ಚಲಿಸಲಾರಂಭಿಸಿ ಲೈಟ್‌ಗಳನೆಲ್ಲ ಆರಿಸಿ ಐದು ನಿಮಿಷವಾಗಿರಬೇಕು, ಶಮೀ ಮಾತು ಶುರುಮಾಡಿದಳು, '...ಕಳ್ಳಿ...', '...ಯಾವ ಜನ್ಮದ ಕರ್ಮವೋ, ಇದು ಹುಟ್ಟಿದೆ!...'

'...ಅಪ್ಪ ಬಾರೋ ತಿಮ್ಮಪ್ಪ ಬಾರೋ, ಕಂದರ್ಪನಯ್ಯನೇ ಕಂಚಿವರದ ಬಾರೋ...' ಬಸ್ಸು ಬಾಳೆಹೊನ್ನೂರು ದಾಟಿ ಸಾಗುತ್ತಿತ್ತು, ಬೆಳಗು ಹರಿಯುತ್ತಿತ್ತು. ಇನ್ನೂ ಜಿಟಿಜಿಟಿ ಮಳೆ ನಿಂತಿರಲಿಲ್ಲ. ಹಚ್ಚ ಹಸಿರಾದ ಕಾಡು, ಕಾಡಿನ ನಡುವಿಂದ ಮೇಲಕ್ಕೇರುತ್ತಿರುವ ಹೊಗೆಯಂತೆ, ಹಿಂಜಿದ ಹತ್ತಿಯಂತೆ ಕಾಣುವ ಮೋಡಗಳು; ಮಳೆಯಲ್ಲೂ ಅಲ್ಲಲ್ಲಿ ರಸ್ತೆ ಮುಚ್ಚಿಕೊಂಡಿರುವ ಮಂಜು, ನಾಟಿ ಮಾಡಿದ ಭತ್ತದ ಗದ್ದೆಗಳು, ತಿರುವು-ತಿರುವಾದ ರಸ್ತೆ. ನನಗೆ ಎಲ್ಲ ಆಯಾಸ ಹರಿದಂತಾಯಿತು. ನೇರಕ್ಕೆ ಕುಳಿತು ಮೈ ಮುರಿದೆ, ಬೆಳಗಿನ ಜಾವ ಯಾವ ಮಾಯದಲ್ಲೋ ನಿದ್ದೆ ಹತ್ತಿತ್ತು. ಶಮೀ ಕೂಡ ಮಾತು ನಿಲ್ಲಿಸಿದ್ದಳು, ಬಹುಶಃ ನಿದ್ದೆ ಮಾಡಿದ್ದಳು ಅನ್ಸುತ್ತೆ...

ಬಸ್ಸು ಶೃಂಗೇರಿ ತಲುಪಿದಾಗ ಏಳು ಗಂಟೆ. ಊರಿನ ತುಂಬ ಪ್ರವಾಸಿಗರು. ನಾನು, ರೂಮು ಸಿಗಲಾರದೆಂದರೂ ಇವನು 'ನಮ್ಮೂರ' ಹೆಸರು ಹೇಳಿದರೆ ಸಿಕ್ಕೇ ಸಿಗುತ್ತೆ ಅಂತ ಮಠದ ಕಾರ್ಯಾಲಯದಲ್ಲಿ ಕೇಳಲು ಹೋಗಿ, ಹುಳ್ಳಗೆ ನಗುತ್ತ ವಾಪ್ಸು ಬಂದ. ತುಂಗೆಯಲ್ಲೇ ಸ್ನಾನ ಮುಗಿಸಿ, ಶಾರದಾ ದರ್ಶನ ಮಾಡಿ ತಿಂಡಿ ತಿಂದು ಕಿಗ್ಗಕ್ಕೆ ಹೋಗುವುದೆಂದು ತೀರ್ಮಾನವಾಯಿತು. ನಾವಿಬ್ಬರೂ ಬ್ಯಾಗಿನೊಂದಿಗೆ ಇಳಿದು ತುಂಗೆಯೆಡೆಗೆ ನಡೆದೆವು. ಸತತ ಮಳೆಯಿಂದ ತುಂಗೆ ದಡ ಮೀರಿ ಹರಿಯುತಿದ್ದಳು, ಕೊಳೆಯನ್ನೆಲ್ಲ ತೊಳೆದು ಕೆಸರಾಗಿದ್ದಳು. ನೀರಿನ ಸೆಳವು ಜೋರಾಗಿತ್ತು. ನಮ್ಮಂತೆಯೇ ಹಲವು ಜನ ಒಂದೆಡೆ ಮೀಯುತ್ತಿದ್ದರು. ನಾವು ದಡಕ್ಕಿಳಿಯುವ ಮುನ್ನ ತಿರುಗಿ ನೋಡಿದ ನನಗೆ ಶಮೀ ಮತ್ತು ಅವಳಪ್ಪ ಅಮ್ಮ ನದಿಯ ತಿರುವಿನ ಆಚೆಕಡೆಗೆ ಇಳಿಯುತಿದ್ದುದು ಕಾಣಿಸಿತು, 'ಅವರಿಗೂ ರೂಮು ಸಿಗಲಿಲ್ಲಾಂತ ಕಾಣುತ್ತೆ'. 'ಯಾರಿಗ್ಗೊತ್ತು? ಬಹುಶಃ ಶೃಂಗೇರಿಗೆ ಬಂದು ತುಂಗಾ ಸ್ನಾನ ಮಾಡದಿದ್ದರೆ ಹೇಗೆ ಅಂತಲೂ ಇರಬಹುದು'. ನೀರು ತಣ್ಣಗೆ ಕೊರೆಯುತ್ತಿತ್ತು. ಹೆಜ್ಜೆಯಿಟ್ಟ ತಕ್ಷಣ ನನಗೆ ಮೈಯೆಲ್ಲ ನಡುಗು. ಇವನು ಡುಬಕ್ಕನೆ ಒಂದು ಮುಳುಗು ಹಾಕಿ, ನನಗೆ ನೀರೆರಚಿ ನಕ್ಕ, ಮಳೆ ನಿಂತು ನಿಂತು ಬರುತ್ತಿತ್ತು...

ಸ್ನಾನ ಮುಗಿಸಿ, ಆ ಸಣ್ಣ ಮಳೆಯಲ್ಲೇ ದಡದಲ್ಲಿ ನಿಂತು ಬಟ್ಟೆ ಹಾಕಿಕೊಂಡು ದಡದಿಂದ ಮೇಲಕ್ಕೆ ಹತ್ತಿದೆವು. ನದಿಯ ತಿರುವಿನ ಆ ಕಡೆ ಜನ ಕೂಡಿದ್ದರು, ಕೆಲವರು ಅಲ್ಲಿಗೆ ಓಡಿಹೋಗುತ್ತಿದ್ದರು. 'ಏನೋ ಆಗಿದೆ ಕಣೋ' ಅಂತ ನಾನೂ ಓಡಿದೆ, ಇವನೂ ನನ್ನ ಹಿಂದೆ ಓಡಿಬಂದ. ಅಲ್ಲಿ ಗುಂಪಿನ ನಡುವೆ ನೆನೆದ ಮೈಯಲ್ಲಿ ನಡುಗುತ್ತ ಶಮೀಯ ಅಪ್ಪ ಕುಳಿತಿದ್ದರು, ಸ್ನಾನಕ್ಕೆಂದು ಕಟ್ಟಿಕೊಂಡಿದ್ದ ಉತ್ತರೀಯ ಕೆಸರಾಗಿತ್ತು. ಅವರ ಮಡಿಲಲ್ಲಿ ಬರೀ ಮೈಯಲ್ಲಿ ಶಮೀ ನಡುಗುತ್ತ ಕುಳಿತಿದ್ದಳು; ದೃಷ್ಟಿ ಶೂನ್ಯದಲ್ಲಿತ್ತು. ಅವರಪ್ಪ ಅಳುಧ್ವನಿಯಲ್ಲಿ ಮಾತನಾಡುತ್ತಿದ್ದರು, 'ಅವಳು ಇಲ್ಲಿಗೆ ಬಂದದ್ದೇ ಮಗಳನ್ನ ತುಂಗೆಗೆ ಕೊಡೋಕೆ ಅಂತೆ. ನಾನು ಹೇಳ್ದೆ, ಬಹಳ ವರ್ಷದ ನಂತರ ಹುಟ್ಟಿದ್ದು ಕಣೇ ಈ ಪಾಪ ಮಾಡಬೇಡ ಅಂತ. ನಾನೂ ನನ್ನ ಮಗಳೂ ಸ್ನಾನಕ್ಕಿಳಿದಿದೀವಿ, ನನ್ನ ಕೈಯಿಂದ ಮಗೂನ ಕಿತ್ಕೊಳೋಕೆ ಬಂದ್ಲು, ನಾನು ಪರಿಪರಿಯಾಗಿ ಬೇಡ್ದೆ, ಯಾರೋ ಈ ಕಡೇನೇ ಸ್ನಾನಕ್ಕೆ ಬರ್ತಿದಾರೆ, ನಾನು ಸುಮ್ನಿರೋಲ್ಲ ನೋಡು ಅಂದೆ, ಅದಕ್ಕವಳು ತಾಯಿ ಮಗೂನ ಕೊಲ್ತಾಳೆ ಅಂದ್ರೆ ಯಾರೂ ನಂಬೋಲ್ಲ ಅಂದು ಮಗೂನ ಕಿತ್ಕೊಂಡೇ ಬಿಟ್ಲು. ಕಾಲು ಜಾರಿ ಬಿದ್ದುಬಿಟ್ಲು. ಇವರು ಓಡಿ ಬರೋಹೊತ್ತಿಗೆ ಮುಳುಗೇ ಬಿಟ್ಟಿದ್ದಳು, ಎಲ್ಲಿ ನನ್ನ ಗೀತಾ...' ಶಮಿಯ ಅಪ್ಪ ಬಿಕ್ಕಳಿಸಿ ಅಳಲು ಶುರುಮಾಡಿದರು. ಆ ದೈತ್ಯ ಆಕೃತಿಗೆ ಅವನ ಅಳು ಬಹಳ ವಿಚಿತ್ರವಾಗಿ ಕಾಣುತಿತ್ತು. ಜನ ತಲೆಗೊಂದು ಮಾತನಾಡುತ್ತಿದ್ದರು, 'ಈ ಮಳೇಲಿ, ಈ ಸುಳೀಲಿ ಎಲ್ಲಿ ಸಿಗುತ್ತೆ. ಎಂತಾ ಈಜುಗಾರರಾದ್ರೂ ಈ ರಭಸ ತಡಿಯೋಕಾದೀತಾ?', 'ಈ ವರ್ಷದ ಮೊದಲ ಬಲಿ ಇದು', 'ಈ ಐದು ವರ್ಷದಲ್ಲಿ ತುಂಗೆ ತುಂಬಿ ಹರಿತಿರೋದು ಇದೇ ಮೊದಲು'. ನಾನು ತುಂಬಾ ಮಂಕಾದೆ ಅನಿಸುತ್ತೆ. ಇವನು ನನ್ನನ್ನು ಹೊರಡಿಸಿಕೊಂಡುಬಂದ. 'ಏನನ್ಯಾಯ ಮಾರಾಯ. ಅವರಮ್ಮನೇ ಅಷ್ಟೊಂದು ಯೋಚನೆ ಮಾಡಿದಾರೆ ಅಂದ್ರೆ', 'ನಾವು ಮಾತನಾಡಿಸಿದಾಗ ಶಮೀ ಬಗ್ಗೆ ಸಕತ್ ಪ್ರೀತಿಯಿರೋತರ ಇದ್ರು ಅಲ್ವಾ?'. 'ಆ ಪ್ರೀತಿನೇ ಈ ಥರ ಮಾಡಿಸಿರಬಹುದು ಅನ್ಸುತ್ತೆ. ಬುದ್ಧಿಮಾಂದ್ಯ ಮಗು, ಮುಂದೆ ಏನೇನ್ ಕಷ್ಟ ಅನುಭವಿಸೋಕಿದೆಯೋ ಅಂತ ಈ ಯೋಚನೆ ಮಾಡಿದ್ರೆ?'. 'ಈಗ ನೋಡು, ಆಕೆ ಹೋದಳು, ಮಗಳು ಉಳಿದಳು'. 'ನನಗ್ಯಾಕೋ ಸಕತ್ ಬೇಜಾರಾಯ್ತು ಮಾರಾಯ'. 'ಹೀಗಾದ್ರೆ ಯಾರಿಗೆ

ತಾನೇ ಬೇಜಾರಾಗೊಲ್ಲ, ಬಾ'. ಇಬ್ಬರೂ ಮಠ ಹೊಕ್ಕು, ಶಾರದಾಂಬೆಯ ದರ್ಶನ ಮಾಡಿದೆವು. ಹೊರಗಡೆ ಮೋಡಗಳು ಇನ್ನೂ ಅಳುತಿದ್ದವು. ಗುಡಿಯೊಳಗೆ, ದೀಪ ಧೂಪಗಳ ನಡುವೆ ವೇದಮಂತ್ರ ಪಠಣಗಳ ನಡುವೆ ಸಿಂಗರಿಸಿಕೊಂಡು ಬೆಚ್ಚಗೆ ನಚ್ಚಗೆ ಕುಳಿತಿದ್ದಳು ಶಾರದೆ. ಎಷ್ಟು ನೋಡಿದರೂ ತೃಪ್ತಿಯಾಗಲೊಲ್ಲದು...

...ಶಾರದೆಯ ದರ್ಶನ ಮಾಡಿಕೊಂಡು, ಕಿಗ್ಗಾಕ್ಕೆ ಹೋಗುವ ಮುನ್ನ ತಿಂಡಿ ತಿಂದು ಬಿಡೋಣವೆಂದು ನಾವಿಬ್ಬರೂ ಜಿಟಿಜಿಟಿ ಮಳೆಯಿಂದ ತಪ್ಪಿಸಿಕೊಳ್ಳುತ್ತ ಹೋಟೆಲ್ ತಲುಪಿದೆವು, ಜನರಿಂದ ಗಿಜಿಗುಡುತಿದ್ದ ಹೋಟೆಲಿನೊಳಗೆ ಕೂರಲು ಜಾಗ ಹುಡುಕುತ್ತ ಅತ್ತಿತ್ತ ನೋಡುತಿದ್ದೆವು; ಅಲ್ಲಿ ನಾವು ನಿಂತ ಹತ್ತಿರದ ಟೇಬಲಿನಲ್ಲೇ ನಿಂತ ನಮಗೆದುರಾಗಿ, ಒದ್ದೆಗೂದಲಿನಲ್ಲಿ ಕೆಂಪುಕಣ್ಣು ಮಾಡಿಕೊಂಡು ಶಮೀ ಕುಳಿತಿದ್ದಳು, ಮತ್ತು ನಮ್ಮನ್ನು ನೋಡಿದ ಕೂಡಲೇ ಮಾತನಾಡಲಾರಂಭಿಸಿದಳು,

'ಈ ಪ್ರಾರಬ್ಧಕ್ಕೆ ಇದೇ ಸರಿಯಾದ ಕೊನೆ... ಇಲ್ಲ ನಾನು ಬದುಕಿರೋ ತನಕ ಈ ಪಾಪ ಮಾಡೋಕೆ ಬಿಡೊಲ್ಲ... ನಾನು ತೀರ್ಮಾನಿಸಿಕೊಂಡೇ ಬಂದಿದೀನಿ...'

"ಘೋರವೆಂಬುದು ಮುಖವಿಲ್ಲದ ಆಗಂತುಕನಂತೆ, ದೂರದ ನೆರೆಹೊರೆಯಲೆಲ್ಲೋ ಇರುವುದಂತೆ...
ಘೋರಕ್ಕೆ ಪೂರ್ಣವಾದ ಪರಿಚಿತ ಮುಖವಿದೆ, ಮಿನುಗುವ ಕಣ್ಣು-ಸಂತಸದ ನಗುವಿದೆ...
ಅದು ಮುಖವಾಡದೊಂದಿಗೆ ನಮ್ಮ ನಿಮ್ಮೊಳಗೇ ಅಲೆದಾಡುತ್ತಿದೆ, ಆ ಮುಖವಾಡ ನಮ್ಮ ನಿಮ್ಮ ಮುಖದಂತಿದೆ."